ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ

ಸಿ.ಸಿ. ನಂಃ 742/2017

ಸಿ.ಡಬ್ಲ್ಯೂಃ 1
ಪಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರುಃ - ಆಂಜನೇಯ ಎಚ್. ,

ವಯಸ್ಸು - 45 ವರ್ಷ

ಉದ್ಯೋಗ - ಸಿ.ಪಿ.ಐ. ರೈಲ್ವೇಸ್ ಹುಬ್ಬಳ್ಳಿ

ವಾಸಸ್ಥಳ - ಹುಬ್ಬಳ್ಳಿ

ದಿನಾಂಕಃ 07-01-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಈ ಹಿಂದೆ ದಿಃ 09-07-2017 ರಿಂದ 26-08-2019 ರವರೆಗೆ ಪಿ. ಎಸ್.ಐ. ಆಗಿ ತಡಸ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತೇನೆ. ದಿಃ19-08-2017 ರಂದು ಮುಂಜಾನೆ 10-00 ಘಂಟೆ ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಶಿಗ್ಗಾಂವನಿಂದ ನೀರಲಗಿ ಕ್ರಾಸ್ ಕಡೆಗೆ ಒಬ್ಬನು ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವ ಬಗ್ಗೆ ಮಾಹಿತಿ ಬಂತು. ನಂತರ ಕೂಡಲೆ ಠಾಣೆಯಲ್ಲಿದ್ದ ಸಿಬ್ಬಂಧಿ ಚಾಸಾ-4 ಮತ್ತು 5 ಹಾಗೂ ಜಣಗೇರಿ ಇವರಿಗೆ ವಿಷಯ ತಿಳಿಸಿರುತ್ತೇನೆ. ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿಕೊಂಡು ಈ ಎಲ್ಲ ವಿಷಯವನ್ನು ಅವರಿಗೆ ಹೇಳಿ ಅವರು ಪಂಚರಾಗಲು ಒಪ್ಪಿಕೊಂಡಿರುತ್ತಾರೆ. ನಂತರ ಸಿಬ್ಬಂಧಿ ಹಾಗೂ ಪಂಚರು ಸೇರಿ ನಮ್ಮ ಸರ್ಕಾರಿ ವಾಹನ ಸಂಖ್ಯೆ ಕೆಎ-27 ಜಿ152 ನೇದ್ದರಲ್ಲಿ ಮುಂಜಾನೆ 10.15 ಘಂಟೆಗೆ ಪೋಲಿಸ್ ಠಾಣೆಯನ್ನು ಬಿಟ್ಟಿರುತ್ತೇನೆ. ಮುತ್ತಳ್ಳಿ ರಾಮನಕೊಪ್ಪ ಕ್ರಾಸ್ ನೀರಲಗಿ ಕ್ರಾಸ್ ಕಡೆಗೆ ಹೊರಟಿದ್ದೆ ಅಲ್ಲಿ ನೀರಲಗಿ ಕ್ರಾಸ್ ಎಂ. ಎಸ್ ಪಾಟೀಲ ಇವರ ಇಟ್ಟಂಗಿ ಬಟ್ಟಿಯ ಹತ್ತಿರ ಒಬ್ಬ ವ್ಯಕ್ತಿ ತನ್ನ ಹೆಗಲ ಮೇಲೆ ಒಂದು ಚೀಲವನ್ನು ಇಟ್ಟುಕೊಂಡು ಬರುತ್ತಿದ್ದನು. ನಮ್ಮನ್ನ ನೋಡಿ ತನ್ನ ಹತ್ತಿರ ಇದ್ದ ಚೀಲವನ್ನು ಇಟ್ಟು ಓಡಿ ಹೋಗುತ್ತಿದ್ದನು. ಆಗ ನಾವೆಲ್ಲರೂ ಆತನನ್ನು ಹಿಡಿದಿರುತ್ತೇವೆ. ಆತನನ್ನು

ವಿಚಾರಿಸಿದಾಗ ಅತನ ಹೆಸರು ಪ್ರಕಾಶ ಕುಂಬಾರ,ಸಾಃ ನೀರಲಗಿ ಎಂದು ಹೇಳಿರುತ್ತಾನೆ. ಚೀಲವನ್ನು ತೆಗೆಸಿ ನೋಡಿದಾಗ ಅದರಲ್ಲಿ 90 ಎಂ. ಎಲ್. ನ ಬೆಂಗಳೂರು ಮಾಲ್ಟ ವಿಸ್ಕೀಯ 96 ಪೌಚಗಳು ಇದ್ದವು. ಇವುಗಳನ್ನು ಮಾರಾಟ ಮಾಡಲು ಪಾಸು ವ ಪರ್ಮಿಟ್ ಇರುವುದಿಲ್ಲ ಎಂದು ಹೇಳಿರುತ್ತಾನೆ. ನಂತರ 10.45 ಘಂಟೆಯಿಂದ 11.45 ಘಂಟೆವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇವೆ. ಪಂಚನಾಮೆಯನ್ನು ಮಾಡಿ ಮಾಲನ್ನು ಹಾಗೂ ಆರೊಪಿಯನ್ನು ವಶಕ್ಕೆ ಪಡೆದುಕೊಂಡು ಪೋಲಿಸ್ ಠಾಣೆಗೆ ಬಂದು ಸರ್ಕಾರದ ಪರವಾಗಿ ದೂರನ್ನು ಕೊಟ್ಟಿರುತ್ತೇನೆ. ಸದರಿ ಮಾಲುಗಳನ್ನು ಆತನಿಂದ ಜಪ್ತು ಮಾಡಿಕೊಂಡು ಪಂಚನಾಮೆಯನ್ನು ಪಂಚರಸಮಕ್ಷಮ ಮಾಡಿ, ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗೆಂದು ಅವುಗಳನ್ನು ಆರೋಪಿಯಿಂದ ವಶಕ್ಕೆ ಪಡೆದುಕೊಂಡಿರುತ್ತೇವೆ. ಸಾಕ್ಷಿಯು ಪಿರ್ಯಾದಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಿರ್ಯಾದಿಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಜಪ್ತು ಮಾಡಿಕೊಂಡಿರುವ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನ್ಯಾಯಾಲಯದಲ್ಲಿ 96 ಬೆಂಗಳೂರು ಮಾಲ್ಟ ವಿಸ್ಕೀ ಖಾಲಿ ಪೌಚಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿಯು ಆ ದಿನ ದಸ್ತಗಿರಿ ಮಡಿರುವ ಆರೋಪಿ ಎಂದು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

ಸಿ.ಸಿ. ನಂಃ 742/2017
ಸಿ.ಡಬ್ಲ್ಯೂಃ 1
ಪಿ.ಡಬ್ಲ್ಯೂಃ 1

<u>ಪಾಟೀ ಸವಾಲುಃ </u>ಶ್ರೀ ಪಿ.ಐ.ಬಿ.ಆರೋಪಿ ಪರ ವಕೀಲರಿಂದ

ಮಾಹಿತಿ ಬಂದ ಮೇಲೆ ನಾನು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರುವುದಿಲ್ಲ. ನಮ್ಮ ಪೋಲಿಸ್ ಠಾಣೆಯಿಂದ ಘಟನೆ ಸ್ಥಳಕ್ಕೆ ಹೋಗಲು ಸುಮಾರು ಅರ್ಧ ಘಂಟೆ ಸಮಯ ಬೇಕಾಗುತ್ತದೆ. ನೀರಲಗಿ ಗ್ರಾಮದಲ್ಲಿ ಸ್ಥಳೀಯ ಪಂಚರು ಸಿಗಲು ಯಾವುದೇ ತೊಂದರೆ ಇರಲಿಲ್ಲ. ಆರೊಪಿಯು ಆ ದಿನ ಯಾವ ಬಣ್ಣ ಬಟ್ಟೆಯನ್ನು ದರಿಸಿದ್ದ ಎಂದು ನನಗೆ ನೆಪಿರುವುದಿಲ್ಲ. ಆರೋಪಿಯು ನಿಂತಿರುವ ಜಾಗೆಯ ಚಕಬಂದಿ ನನಗೆ ನೆನಪು ಇರುವುದಿಲ್ಲ. ಮುದ್ದೆ ಮಾಲು ಒಂದರಲ್ಲಿ ಇರುವ ಪ್ಯಾಕೇಟ್ಗಳನ್ನು ನಮ್ಮ ಠಾಣೆಯಲ್ಲಿ ಬೇರೆ ಪ್ರಕರಣಕ್ಕೆ ಸಂಬಂದಿಸಿದಂತೆ ಇರುತ್ತವೆ ಎಂದರೆ ಸರಿ. ಆದಿನ ಘಟನಾ ಸ್ಥಳಕ್ಕ ಹೋಗಿರುವುದಿಲ್ಲ, ಯಾವುದೇ ದಾಳಿ ಮಾಡಿರುವುದಿಲ್ಲ, ಮೇಲಾಧಿಕಾರಿಗಳ ಮಾತುಗಳನ್ನು ಕೇಳಿ ಠಾಣೆಯಲ್ಲಿ ಪ್ರಕರಣದ ಅಂಕೆ ಸಂಖ್ಯೆಯನ್ನು ತೋರಿಸಲು ಸುಳ್ಳು ಪಿರ್ಯಾದಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಅದೆ.

ಸಹಿ/-07-01-2022
ಜೆ. ಎಂ. ಎಫ್. ಸಿ., ಶಿಗ್ಗಾಂವ.